# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ : 344**

**ಮಾನ್ಯ ಸದಸ್ಯರ ಹೆಸರು : ಶ್ರೀ ಎಂ. ನಾಗರಾಜು (ವಿಧಾನಸಭಾ ಕ್ಷೇತ್ರದಿಂದ ಚುನಾಯಿತರಾದವರು)**

**ಉತ್ತರಿಸಬೇಕಾದ ದಿನಾಂಕ : 13.08.2025**

**ಉತ್ತರಿಸಬೇಕಾದ ಸಚಿವರು : ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು.**

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿ ಅದರಲ್ಲೂ ಪ್ರತ್ಯೇಕವಾಗಿ ಕೊಡಗು ಮತ್ತು ಕುಶಾಲನಗರದ ಗ್ರಾಮೀಣ ಭಾಗಗಳಲ್ಲಿ ಪಶುವೈದ್ಯರ ತೀವ್ರ ಕೊರತೆ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹೌದು ಸರ್ಕಾರದ ಗಮನಕ್ಕೆ ಬಂದಿದೆ.<br><br>ಕೊಡಗು ಜಿಲ್ಲೆಯ ಕುಶಾಲನಗರ ತಾಲೂಕಿನ ಗ್ರಾಮೀಣ ಭಾಗವಾದ ಪಶುಚಿಕಿತ್ಸಾಲಯ ಹೆಬ್ಬಾಲೆ ಮತ್ತು ಪಶು ಆಸ್ಪತ್ರೆ ಸುಂಟಿಕೊಪ್ಪದಲ್ಲಿ ಸೋಮವಾರಪೇಟೆ ತಾಲ್ಲೂಕಿನ ಪಶು ಆಸ್ಪತ್ರೆ ಕೊಡ್ಲಿಪೇಟೆ ಹಾಗೂ ವಿರಾಜಪೇಟೆ ತಾಲ್ಲೂಕಿನ ಪಶು ಆಸ್ಪತ್ರೆ ಅಮ್ಮತ್ತಿ ಮತ್ತು ಮಡಿಕೇರಿ ತಾಲ್ಲೂಕಿನ ಪಶು ಆಸ್ಪತ್ರೆ ಭಾಗಮಂಡಲದ ಗ್ರಾಮೀಣ ಭಾಗದಲ್ಲಿ ಪ್ರತಿ ಸಂಸ್ಥೆಗೆ ಒಬ್ಬರಂತೆ ಗುತ್ತಿಗೆ ಆಧಾರದ ಮೇಲೆ 5 ಪಶುವೈದ್ಯರು ಜಿಲ್ಲೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ |
| ಆ | ರಾಜ್ಯದ ಸುಮಾರು 50ಕ್ಕೂ ಹೆಚ್ಚು ಗ್ರಾಮಗಳಲ್ಲಿ ಪಶುವೈದ್ಯರು ಇಲ್ಲದೇ ಕಳೆದ 6 ವರ್ಷಗಳಿಂದ ಪಶು ಚಿಕಿತ್ಸೆ ಇಲ್ಲದೇ ಪರದಾಡುತ್ತಿರುವುದು ನಿಜವೇ; | ಇಲಾಖೆಯಲ್ಲಿ ಪಶುವೈದ್ಯರ ಹುದ್ದೆಗಳು ಖಾಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆ, ಆದರೂ ಸಹ ರೈತರ ಜಾನುವಾರುಗಳ ಚಿಕಿತ್ಸೆಗೆ ತೊಂದರೆಯಾಗದಂತೆ ಖಾಲಿ ಇರುವ ಪಶು ವೈದ್ಯಾಧಿಕಾರಿಗಳ ಹುದ್ದೆಗಳಿಗೆದುರಾಗಿ ಪ್ರಭಾರ ವ್ಯವಸ್ಥೆ ಮೂಲಕ / ಗುತ್ತಿಗೆ ಪಶುವೈದ್ಯರ ಮೂಲಕ ಸೇವೆ ನೀಡಲಾಗುತ್ತಿದೆ.<br><br>ಸಂಚಾರಿ ಪಶು ಚಿಕಿತ್ಸಾ ಘಟಗಳ ಮೂಲಕ ತುರ್ತು ಚಿಕಿತ್ಸೆಗಳನ್ನು ಜಾನುವಾರುಗಳ ಮಾಲಿಕರ ಮನೆ ಬಾಗಿಲಿಗೆ ಸೇವೆಯನ್ನು ನೀಡಲಾಗುತ್ತಿದೆ. |

...2

| | | |
|---|---|---|
| ಇ | ಹಾಗಿದ್ದಲ್ಲಿ, ಇಷ್ಟು ವರ್ಷಗಳ ಕಾಲ ಈ ಗ್ರಾಮಗಳಲ್ಲಿ ಪಶುವೈದ್ಯರ ನೇಮಕಾತಿ ಮಾಡದಿರಲು ಕಾರಣಗಳೇನು; | 400 ಪಶುವೈದ್ಯಾಧಿಕಾರಿಗಳ ಹುದ್ದೆಗಳಿಗೆ ಕೆ.ಪಿ.ಎಸ್.ಸಿ ಮೂಲಕ ನೇಮಕಾತಿ ಮಾಡಿಕೊಳ್ಳಲು 2023-24ನೇ ಸಾಲಿನಲ್ಲಿ ಸರ್ಕಾರವು ಅನುಮತಿ ನೀಡಲಾಗಿದ್ದು, ನೇಮಕಾತಿ ಪ್ರಕ್ರಿಯೆಯಾಗುವವರೆಗೆ ಪರ್ಯಾಯವಾಗಿ 400 ಗುತ್ತಿಗೆ ಆಧಾರದ ಮೇಲೆ ಪಶುವೈದ್ಯಾಧಿಕಾರಿಗಳನ್ನು ನೇಮಿಸಿಕೊಳ್ಳಲು ಅನುಮತಿ ನೀಡಲಾಗಿದೆ. ಅದರಂತೆ, 384 ಪಶುವೈದ್ಯಾಧಿಕಾರಿಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಂಡಿದ್ದು, ಸದರಿ ಅಧಿಕಾರಿಗಳು ನಿಯುಕ್ತಿಗೊಳಿಸಿದ ಸ್ಥಳದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. |
| ಈ | ಪಶುಪಾಲನೆ ಮತ್ತು ಪಶುವೈದ್ಯಕೀಯ ಸೇವೆಗಳ (AHVS) ಇಲಾಖೆಯ 21 ಅಧಿಕಾರಿಗಳು ಬೆಂಗಳೂರಿನ ಬಿ.ಬಿ.ಎಂ.ಪಿ ಸಂಸ್ಥೆಯಲ್ಲಿ ತಮ್ಮ ನಿಯೋಜನೆಯ ಅವಧಿ ಮೀರಿ ಉಳಿದುಕೊಂಡಿದ್ದು, ಸೇವಾ ನಿಯಮಗಳ ಅಡಿಯಲ್ಲಿ 5 ವರ್ಷಗಳ ಮಿತಿಯನ್ನು ಉಲ್ಲಂಘಿಸಿರುವುದರಿಂದ ಈ ಸಮಸ್ಯೆ ಉದ್ಭವಿಸಿರುವುದು ನಿಜವೇ; ಈ ಕುರಿತು ಕೈಗೊಂಡಿರುವ ಕ್ರಮವೇನು? | ಪಶುಪಾಲನೆ ಮತ್ತು ಪಶುವೈದಕೀಯ ಸೇವೆಗಳ (AHVS) 21 ಅಧಿಕಾರಿಗಳ ಪೈಕಿ ಬಿ.ಬಿ.ಎಂ.ಪಿ ಸಂಸ್ಥೆಯಲ್ಲಿ ಇಲಾಖೆಯ 02 ಪಶುವೈದಾಧಿಕಾರಿಗಳು 5 ವರ್ಷ ಮೇಲ್ಪಟ್ಟು ನಿಯೋಜನೆ ಮೇರೆಗೆ ಕರ್ತವ್ಯ ನಿರ್ವಹಿಸುತ್ತಿದ್ದಾರೆ.<br><br>ಪ್ರಸ್ತುತ ನಿಯೋಜನೆಯಲ್ಲಿದ್ದ 19 ಪಪಶುವೈದ್ಯಾಧಿಕಾರಿಗಳನ್ನು ಮಾತ್ರ ಇಲಾಖೆಗೆ ಹಿಂಪಡೆಯಲಾಗಿದ್ದು, ಇಲಾಖೆಯ ವಿವಿಧ ಕಛೇರಿಗಳಿಗೆ ಸ್ಥಳ ನಿಯುಕ್ತಿಗೊಳಿಸಲಾಗಿದೆ. |

**ಸಂಖ್ಯೆ:ಪಸಂಮೀ 174 ಸಲೆವಿ 2025**

**(ಕೆ. ವೆಂಕಟೇಶ್)**
ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು